# ಮರಣಾನಂತರ ಜೀವನ

[ الحياة بعد الموت ]

[**Kannada –** ಕನ್ನಡ –كنادي ]


**ಮುಹಮ್ಮದ್ ಹಂಝಾ ಪುತ್ತೂರು**

**محمد حمزة بتوري**



IslamHouse.com

1435 – 2014

بِسْمِ اللهِ الرَّحْمَـنِ الرَّحِيم

ಮರಣಾನಂತರ ಜೀವನ (life after death) ಇದೆಯೇ ಎಂಬ ವಿಷಯವು ವಿಜ್ಞಾನದ ವ್ಯಾಪ್ತಿಯಲ್ಲಿ ಬರುವುದಿಲ್ಲ. ಯಾಕೆಂದರೆ ವಿಜ್ಞಾನ ಕೇವಲ ಮಾಹಿತಿಗಳ ವರ್ಗೀಕರಣ ಮತ್ತು ವಿಶ್ಲೇಷಣೆ (classification and analysis of data) ಯನ್ನು ಮಾತ್ರ ಪರಿಗಣಿಸುತ್ತದೆ. ಹೆಚ್ಚಾಗಿ, ಮಾನವನು ಆಧುನಿಕ ಪ್ರಜ್ಞೆಯೊಂದಿಗೆ ವೈಜ್ಞಾನಿಕ ತಪಾಸನೆ ಹಾಗೂ ಸಂಶೋಧನೆ (scientific inquiring and research) ಯಲ್ಲಿ ತಲ್ಲೀನನಾಗಿರುವುದು ಕಳೆದ ಕೆಲವು ಶತಮಾನಗಳಿಂದಷ್ಟೇ ಆಗಿದೆ. ಆದರೆ ಮರಣಾನಂತರ ಜೀವನವೆಂಬ ಪರಿಕಲ್ಪನೆಯು ಮನುಷ್ಯ ಮನಸ್ಸಿನಲ್ಲಿ ಅನಿರ್ದಿಷ್ಟ ಕಾಲದಿಂದಲೇ ಹಾಸುಹೊಕ್ಕಿ ಅವನಿಗೆ ಸುಪರಿಚಿತವಾಗಿದೆ.

ಅಲ್ಲಾಹನನ್ನು ಮಾತ್ರ ಆರಾಧಿಸಬೇಕು ಮತ್ತು ಮರಣಾನಂತರ ಜೀವನದಲ್ಲಿ ವಿಶ್ವಾಸವಿಡಬೇಕು ಎಂಬ ತತ್ವವನ್ನು ಎಲ್ಲ ಪ್ರವಾದಿಗಳೂ ತಮ್ಮ ತಮ್ಮ ಜನತೆಗೆ ಬೋಧಿಸಿದ್ದರು. ಮರಣಾನಂತರ ಜೀವನದಲ್ಲಿ ವಿಶ್ವಾಸವಿಡಬೇಕೆಂದು ಬೋಧಿಸದ ಒಬ್ಬರೇ ಒಬ್ಬ ಪ್ರವಾದಿಯೂ ಗತಿಸಿಹೋಗಿಲ್ಲ. ಮರಣಾನಂತರ ಜೀವನದ ಮೇಲಿರುವ ವಿಶ್ವಾಸಕ್ಕೆ ಪ್ರವಾದಿಗಳು ಎಷ್ಟೊಂದು ಒತ್ತು ನೀಡುತ್ತಿದ್ದರೆಂದರೆ ಅದರಲ್ಲಿರುವ ಕೊಂಚ ಸಂದೇಹವೂ ದೇವನಿಷೇಧಕ್ಕೆ ಮತ್ತು ಧರ್ಮದ ಇತರೆಲ್ಲ ನಂಬಿಕೆಗಳ ನಿರಾಕರಣೆಗೆ ಸಮಾನವಾಗಿದೆ ಎಂದು ಅವರು ಬೋಧಿಸುತ್ತಿದ್ದರು.

ವಾಸ್ತವಿಕವಾಗಿ, ಮರಣಾನಂತರ ಜೀವನವೆಂಬ ಈ ಅಭೌತಿಕ ವಿಷಯದ ಕುರಿತು ಪ್ರವಾದಿಗಳೆಲ್ಲರೂ ಅತ್ಯಂತ ಆತ್ಮವಿಶ್ವಾಸದಿಂದ ಮತ್ತು ಸಮಾನ ದೃಷ್ಟಿಕೋನದಿಂದ ಬೋಧಿಸಿದ್ದರು. ಕೆಲವೊಮ್ಮೆ ಇಬ್ಬರು ಪ್ರವಾದಿಗಳ ಮಧ್ಯೆಯಿದ್ದ ಅಂತರವು ಸಾವಿರ ವರ್ಷಗಳಷ್ಟು ಸುದೀರ್ಘವಾಗಿದ್ದಾಗಲೂ ಆ ಬೋಧನೆಗಳಲ್ಲಿರುವ ತತ್ವ ಸಾಮ್ಯತೆಯು ಅವರೆಲ್ಲರೂ ಇದನ್ನು ಏಕೈಕ ದೈವಿಕ ಮೂಲದಿಂದ ಪಡೆದಿದ್ದರು ಎಂಬುದನ್ನು ಸಾಬೀತುಪಡಿಸುತ್ತದೆ.

ನಾವೆಲ್ಲರೂ ಅರಿತಿರುವಂತೆ ಪ್ರವಾದಿಗಳೆಲ್ಲರೂ ತಮ್ಮ ತಮ್ಮ ಜನತೆಗಳಿಂದ ವ್ಯಾಪಕ ವಿರೋಧವನ್ನು ಎದುರಿಸಿದ್ದರು. ಏಕದೇವಾರಾಧನೆಯನ್ನು ವಿರೋಧಿಸುವವರು ಮಾತ್ರವಲ್ಲದೆ ಮರಣಾನಂತರ ಜೀವನವೆಂಬ ಪರಿಕಲ್ಪನೆಯನ್ನು ಅಂಗೀಕರಿಸಲು ಸಿದ್ಧರಿಲ್ಲದ ಜನರೂ ಇವರ ಬದ್ಧ ವಿರೋಧಿಗಳಾಗಿದ್ದರು. ಹೀಗಿರುವಾಗ, ಈ

ವಿರೋಧದ ಮಧ್ಯೆಯೂ ಅನೇಕ ಜನರು ಪ್ರವಾದಿಗಳ ಮೇಲೆ ವಿಶ್ವಾಸವಿಟ್ಟು ಅವರ ಪ್ರಾಮಾಣಿಕ ಅನುಯಾಯಿಗಳಾಗಿ ಮಾರ್ಪಟ್ಟಿದ್ದರು.

ಇಲ್ಲಿ ಮೂಡುವ ಪ್ರಶ್ನೆಯೇನೆಂದರೆ, ಅಸ್ತಿತ್ವದಲ್ಲಿದ್ದ ನಂಬಿಕೆಗಳನ್ನೂ, ಸಂಪ್ರದಾಯ ಗಳನ್ನೂ, ತಾತ ಮುತ್ತಾತಂದಿರ ಕಾಲದಿಂದ ವಂಶೀಯವಾಗಿ ತಾವು ಅನುಸರಿಸುತ್ತಾ ಬಂದಿರುವ ರೂಢಮೂಲ ವಿಶ್ವಾಸ (ancestral beliefs)ಗಳನ್ನು ತೊರೆದು, ತಮ್ಮ ಜನತೆಯಿಂದ ಪೂರ್ಣವಾಗಿ ಬಹಿಷ್ಕರಿಸಲ್ಪಡುವ ಅಪಾಯಕ್ಕೆ ತಲೆಯೊಡ್ಡಿ ಪ್ರವಾದಿಗಳು ಬೋಧಿಸಿದ ಆ ಮರಣಾನಂತರ ಜೀವನವೆಂಬ ಪರಿಕಲ್ಪನೆಯನ್ನು ಅವರು ಅಂಗೀಕರಿಸಲು ಕಾರಣವೇನು? ಇದಕ್ಕಿರುವ ಸರಳ ಉತ್ತರವೇನೆಂದರೆ ಅವರು ಹೃದಯಾಂತರಾಳದಿಂದ ಚಿಂತಿಸಿದರು ಮತ್ತು ಸತ್ಯವು ಮನಗಂಡಾಗ ಅದರ ಹಿಂಬಾಲಕರಾಗಿ ಮಾರ್ಪಟ್ಟರು.

ಅಗೋಚರವಾಗಿರುವ ವಾಸ್ತವಿಕತೆಗಳ ಕುರಿತು ಮನುಷ್ಯನನ್ನು ಸತ್ಯದತ್ತ ಮುನ್ನಡೆಸುವ ಆಂತರಿಕ ಪ್ರಜ್ಞೆಯಾಗಿದೆ ಇದು. ಈ ಕಾರಣದಿಂದಲೇ ಪ್ರವಾದಿಗಳು ಜನರನ್ನು ಅಲ್ಲಾಹನೆಡೆಗೆ ಆಹ್ವಾನಿಸುವಾಗ ಅವರು ಜನರ ನೈತಿಕ ಮತ್ತು ವೈಚಾರಿಕ ಪ್ರಜ್ಞೆಯ ಮೊರೆಹೋಗುತ್ತಿದ್ದರು.

ಉದಾಹರಣೆಗೆ, ಮಕ್ಕಾ ನಿವಾಸಿಗಳಾದ ಬಹುದೇವ ವಿಶ್ವಾಸಿಗಳು ಮರಣಾನಂತರ ಜೀವನವೆಂಬ ಪರಿಕಲ್ಪನೆಯನ್ನು ನಿಷೇಧಿಸಿದಾಗ ಆದರಣೀಯ ಕುರ್‌ಆನ್ ಯುಕ್ತಿಪರವಾದ ಮತ್ತು ವೈಚಾರಿಕ ತರ್ಕಗಳ (logical and rational arguments) ಆಧಾರದೊಂದಿಗೆ ಅವರ ದುರ್ಬಲ ನಿಲುವನ್ನು ಖಂಡಿಸಿತು:

﴿أَوَلَمْ يَرَ الْإِنْسَانُ أَنَّا خَلَقْنَاهُ مِنْ نُطْفَةٍ فَإِذَا هُوَ خَصِيمٌ مُبِينٌ * وَضَرَبَ لَنَا مَثَلًا وَنَسِيَ خَلْقَهُ قَالَ مَنْ يُحْيِ الْعِظَامَ وَهِيَ رَمِيمٌ * قُلْ يُحْيِيهَا الَّذِي أَنْشَأَهَا أَوَّلَ مَرَّةٍ وَهُوَ بِكُلِّ خَلْقٍ عَلِيمٌ * الَّذِي جَعَلَ لَكُمْ مِنَ الشَّجَرِ الْأَخْضَرِ نَارًا فَإِذَا أَنْتُمْ مِنْهُ تُوقِدُونَ * أَوَلَيْسَ الَّذِي خَلَقَ السَّمَاوَاتِ وَالْأَرْضَ بِقَادِرٍ عَلَى أَنْ يَخْلُقَ مِثْلَهُمْ بَلَى وَهُوَ الْخَلَّاقُ الْعَلِيمُ * إِنَّمَا أَمْرُهُ إِذَا أَرَادَ شَيْئًا أَنْ يَقُولَ لَهُ كُنْ فَيَكُونُ * فَسُبْحَانَ الَّذِي بِيَدِهِ مَلَكُوتُ كُلِّ شَيْءٍ وَإِلَيْهِ تُرْجَعُونَ﴾

**"ಅವನು (ಮನುಷ್ಯನು) ನಮಗೊಂದು ಉದಾಹರಣೆ ಕೊಟ್ಟಿದ್ದಾನೆ ಮತ್ತು ತನ್ನ ಸೃಷ್ಟಿಯನ್ನೇ ಅವನು ಮರೆತು ಬಿಟ್ಟಿದ್ದಾನೆ! ಅವನು ಕೇಳುತ್ತಾನೆ: ಈ ಮೂಳೆಗಳು**

**ಕೊಳೆತುಹೋಗಿ ಧೂಳಿಯಾಗಿ ಮಾರ್ಪಟ್ಟ ಬಳಿಕ ಅದಕ್ಕೆ ಜೀವ ಕೊಡುವವರಾದರೂ ಯಾರು? (ಓ ಪ್ರವಾದಿ! ಅವರೊಂದಿಗೆ) ಹೇಳು: ಅವುಗಳನ್ನು (ಮೂಳೆಗಳನ್ನು) ಯಾರು ಮೊಟ್ಟಮೊದಲು ಸೃಷ್ಟಿಸಿದನೋ ಅವನೇ ಅದಕ್ಕೆ (ಪುನಃ) ಜೀವ ಕೊಡುತ್ತಾನೆ. ಅವನು ಎಲ್ಲ ಸೃಷ್ಟಿಗಳ ಕುರಿತೂ ಅರಿವುಳ್ಳವನಾಗಿದ್ದಾನೆ. ಅವನು ಹಸಿ ಮರದಿಂದ ಬೆಂಕಿಯನ್ನು ಉತ್ಪಾದಿಸಿಕೊಟ್ಟವನಾಗಿದ್ದಾನೆ ಮತ್ತು ನೋಡಿರಿ! ನೀವು ಅದರಿಂದ ಬೆಂಕಿಯುರಿ ಸುತ್ತಿರುವಿರಿ! ಆಕಾಶಗಳನ್ನು ಮತ್ತು ಭೂಮಿಯನ್ನು (ಸಮಸ್ತ ವಿಶ್ವವನ್ನು) ಸೃಷ್ಟಿಸಿದವನಾರೋ ಅವನಿಗೆ ನಿಮ್ಮಂತಿರುವವರನ್ನು ಸೃಷ್ಟಿಸಲು ಸಾಧ್ಯವಿಲ್ಲವೇ? ಹೌದು! ಸತ್ಯವಾಗಿಯೂ ಅವನು ಎಲ್ಲವನ್ನೂ ಅರಿತಿರುವ ಪರಮೋಚ್ಛ ಸೃಷ್ಟಿಕರ್ತನಾಗಿದ್ದಾನೆ. ಖಂಡಿತವಾಗಿಯೂ, ಅವನು ಯಾವುದಾದರೊಂದು ವಸ್ತುವನ್ನು ಸೃಷ್ಟಿಸಲು ಇಚ್ಛಿಸಿದರೆ ಅದರೊಂದಿಗೆ ಉಂಟಾಗು ಎಂದಷ್ಟೇ ಹೇಳುವನು. ತಕ್ಷಣ ಅದುಂಟಾಗುವುದು. ಆದ್ದರಿಂದ ಯಾರ ಕೈಯಲ್ಲಿ ಎಲ್ಲ ವಸ್ತುಗಳ ಒಡೆತನವಿದೆಯೋ ಅವನು ಪರಮ ಪಾವನನಾಗಿದ್ದಾನೆ ಮತ್ತು ನೀವೆಲ್ಲರೂ ಅವನ ಬಳಿಗೇ ಮರಳುವವರಾಗಿರುವಿರಿ." (ಕುರ್‌ಆನ್ 36/78–83)**

ಇನ್ನೊಂದು ಕಡೆ, ಮರಣಾನಂತರ ಜೀವನವಿಲ್ಲ ಎಂಬ ಅವಿಶ್ವಾಸಿಗಳ ವಾದಕ್ಕೆ ಯಾವ ತಳಹದಿಯೂ ಇಲ್ಲವೆಂಬುದನ್ನು ದೃಢೀಕರಿಸುತ್ತಾ ಕುರ್‌ಆನ್ ಹೇಳುತ್ತದೆ:

﴿وَقَالُوا مَا هِيَ إِلَّا حَيَاتُنَا الدُّنْيَا نَمُوتُ وَنَحْيَا وَمَا يُهْلِكُنَا إِلَّا الدَّهْرُ وَمَا لَهُمْ بِذَلِكَ مِنْ عِلْمٍ إِنْ هُمْ إِلَّا يَظُنُّونَ * وَإِذَا تُتْلَى عَلَيْهِمْ آيَاتُنَا بَيِّنَاتٍ مَا كَانَ حُجَّتَهُمْ إِلَّا أَنْ قَالُوا ائْتُوا بِآبَائِنَا إِنْ كُنْتُمْ صَادِقِينَ * قُلِ اللَّهُ يُحْيِيكُمْ ثُمَّ يُمِيتُكُمْ ثُمَّ يَجْمَعُكُمْ إِلَى يَوْمِ الْقِيَامَةِ لَا رَيْبَ فِيهِ وَلَكِنَّ أَكْثَرَ النَّاسِ لَا يَعْلَمُونَ﴾

**"ಅವರು (ಅವಿಶ್ವಾಸಿಗಳು) ಹೇಳುವರು: ನಮ್ಮ ಈ ಐಹಿಕ ಜೀವನದ ಹೊರತು ಬೇರೇನೂ ಇಲ್ಲ. ನಾವು ಮರಣಹೊಂದುತ್ತೇವೆ ಮತ್ತು ಬದುಕುತ್ತೇವೆ. ಕಾಲದ ಹೊರತು ಬೇರೇನೂ ನಮ್ಮನ್ನು ನಾಶಗೊಳಿಸುವುದಿಲ್ಲ. ಆದರೆ (ವಾಸ್ತವಿಕವಾಗಿ) ಅವರಿಗೆ ಆ ವಿಷಯದಲ್ಲಿ ಯಾವುದೇ ಜ್ಞಾನವಿಲ್ಲ. ಅವರು ಕೇವಲ ಊಹಿಸುವುದನ್ನಷ್ಟೇ ಮಾಡುತ್ತಿದ್ದಾರೆ. (ಮರಣಾನಂತರ ಜೀವನದ ಕುರಿತು) ನಮ್ಮ ಸುಸ್ಪಷ್ಟವಾದ ಪುರಾವೆಗಳನ್ನು ಅವರಿಗೆ ಓದಿಕೊಟ್ಟಾಗ ಅವರ ಪುರಾವೆಯು, ಹಾಗಾದರೆ ನೀವು ಸತ್ಯವನ್ನೇ ನುಡಿಯುವವರಾಗಿದ್ದರೆ (ಮರಣಹೊಂದಿದ) ನಮ್ಮ ಪೂರ್ವಿಕರನ್ನು ಮರಳಿ ತನ್ನಿರಿ ಎಂದು ಹೇಳುವುದರ ಹೊರತು ಬೇರೇನೂ ಆಗಿರುವುದಿಲ್ಲ. (ಓ ಪ್ರವಾದಿ!**

**ಅವರೊಂದಿಗೆ) ಹೇಳು: ಅಲ್ಲಾಹು ಜೀವ ಕೊಡುತ್ತಾನೆ. ತರುವಾಯ ಮೃತಪಡಿಸುತ್ತಾನೆ. ತರುವಾಯ ನಿಮ್ಮನ್ನು ಪುನರುತ್ಥಾನ ದಿನದಂದು ಒಟ್ಟುಗೂಡಿಸುತ್ತಾನೆ. ಅದರಲ್ಲಿ ಸಂದೇಹವೇ ಇಲ್ಲ. ಆದರೆ ಜನರ ಪೈಕಿ ಹೆಚ್ಚಿನವರೂ ಅರಿತುಕೊಳ್ಳುವುದಿಲ್ಲ." (ಕುರ್‌ಆನ್ 45/24–26)**

ಅಲ್ಲಾಹು ಮರಣ ಹೊಂದಿದವರನ್ನು ಪುನರ್ಜೀವಗೊಳಿಸುವನು ಎಂಬ ವಿಷಯದಲ್ಲಿ ಸಂದೇಹವೇ ಇಲ್ಲ. ಆದರೆ ಅದು ಅವನ ಪೂರ್ವನಿಗದಿತ ಕಾರ್ಯತಂತ್ರಕ್ಕೆ ಅನುಸಾರವಾಗಿರುತ್ತದೆ. ಅಂದರೆ ಒಂದು ದಿನ ಈ ವಿಶ್ವ ಸಂಪೂರ್ಣ ನಾಶವಾಗಿ ಜನರೆಲ್ಲರೂ ವಿಚಾರಣೆಗಾಗಿ ಅಲ್ಲಾಹನ ಮುಂದೆ ನಿಲ್ಲುವರು. ಆ ದಿನವು ಪರಲೋಕ ಜೀವನದ ಮೊದಲ ದಿನವಾಗಿರುವುದು ಮತ್ತು ಆ ಜೀವನಕ್ಕೆ ಕೊನೆಯೆಂಬುದೇ ಇಲ್ಲ. ಅಂದು ಅಲ್ಲಾಹು ಜನರ ಕರ್ಮಗಳಿಗೆ ಅನುಸಾರವಾಗಿ ರಕ್ಷೆ ಮತ್ತು ಶಿಕ್ಷೆಯನ್ನು ನೀಡುವನು.

ಮರಣಾನಂತರ ಜೀವನವು ಮನುಷ್ಯನ ನೈತಿಕ ಪ್ರಜ್ಞೆ (moral consciousness)ಯ ಬೇಡಿಕೆಯಾಗಿದೆ. ಆದ್ದರಿಂದಲೇ ಅದರ ಅಗತ್ಯದ ಕುರಿತು ಕುರ್‌ಆನ್ ಸ್ಪಷ್ಟವಾಗಿ ವಿವರಿಸುತ್ತದೆ. ವಾಸ್ತವಿಕವಾಗಿ, ಮರಣಾನಂತರ ಜೀವನವೆಂಬುದು ಇಲ್ಲದೇ ಹೋಗಿರುತ್ತಿದ್ದರೆ ದೇವವಿಶ್ವಾಸಕ್ಕೆ ಅರ್ಥವೇ ಇರುತ್ತಿರಲಿಲ್ಲ. ಅಂತಹ ದೇವವಿಶ್ವಾಸವು ತಾನು ಸೃಷ್ಟಿಸಿದ ಸೃಷ್ಟಿಗಳ ಕುರಿತು ಯಾವುದೇ ಹೊಣೆಯೂ ಇಲ್ಲದ, ಅಂದರೆ ಸುಕೃತ್ಯಕ್ಕಾಗಿ ಪಾರಿತೋಷಕ ನೀಡದ ಮತ್ತು ದುಷ್ಕೃತ್ಯಕ್ಕಾಗಿ ದಂಡಿಸದ ಹಾಗೂ ತನ್ನ ಸೃಷ್ಟಿಗಳ ಮಧ್ಯೆ ನ್ಯಾಯ ಪಾಲಿಸದ ಒಬ್ಬ ಅಸಮರ್ಥ ದೇವನ ಮೇಲಿರುವ ವಿಕಲ ವಿಶ್ವಾಸವಷ್ಟೇ ಆಗಿರುವುದು.

ಆದರೆ ಅಲ್ಲಾಹು ಸಮಗ್ರವಾಗಿ ನ್ಯಾಯ ಪಾಲಿಸುವವನಾಗಿದ್ದಾನೆ. ಮನುಷ್ಯನ ಐಹಿಕ ಜೀವನ ಕಿರಿದಾಗಿರುವುದರಿಂದ ಮತ್ತು ಈ ಭೌತಿಕ ಜೀವನ ನಶ್ವರವಾಗಿರುವುದರಿಂದ, ಒಬ್ಬ ವ್ಯಕ್ತಿ ಮಾಡಿದ ಕೆಡುಕಿಗೆ ಅನುಗುಣವಾಗಿ ಅವನನ್ನು ಶಿಕ್ಷಿಸಲು ಇಲ್ಲಿ ಅಸಾಧ್ಯ. ಒಬ್ಬನನ್ನು ಹತ್ಯೆ ಮಾಡಿದವನಿಗೂ ನೂರು ಜನರನ್ನು ಹತ್ಯೆ ಮಾಡಿದವನಿಗೂ ಇಲ್ಲಿ ನೀಡಲಾಗುವ ಗರಿಷ್ಠ ಶಿಕ್ಷೆ ಒಂದು ಬಾರಿ ಗಲ್ಲಿಗೇರಿಸುವುದಾಗಿದೆ. ಇದು ಆ ಇಬ್ಬರು ಕೊಲೆಗುಡುಕರ ಮಧ್ಯೆ ನ್ಯಾಯಪಾಲಿಸಿದಂತಾಗುವುದೇ? ಖಂಡಿತ ಇಲ್ಲ. ಒಬ್ಬ ಮಹಿಳೆಯನ್ನು ಕೆಡಿಸಿದ ಕಾರಣ ಒಬ್ಬನಿಗೆ ಇಪ್ಪತ್ತು ವರ್ಷಗಳ ಕಠಿಣ ಕಾರಾಗ್ರಹ ಶಿಕ್ಷೆ ನೀಡುವುದಾದರೆ ಹತ್ತು ಮಂದಿ ಮಹಿಳೆಯರನ್ನು ಕೆಡಿಸಿದವನಿಗೆ ಇನ್ನೂರು ವರ್ಷಗಳ ಕಠಿಣ ಕಾರಾಗ್ರಹ ಶಿಕ್ಷೆ ನೀಡಬೇಕಾದುದು ನ್ಯಾಯದ ಬೇಡಿಕೆಯಾಗಿದೆ. ಆದರೆ

ಮನುಷ್ಯನೊಬ್ಬನ ಗರಿಷ್ಠ ಆಯಸ್ಸು ಕೇವಲ ನೂರ ಇಪ್ಪತ್ತು ವರ್ಷಗಳಷ್ಟೇ ಆಗಿರುವುದರಿಂದ ಅವನಿಗೆ ಇನ್ನೂರು ವರ್ಷಗಳ ಶಿಕ್ಷೆ ನೀಡುವುದು ಹೇಗೆ? ಆದ್ದರಿಂದ ಸಂಪೂರ್ಣ ನ್ಯಾಯಾಧಿಷ್ಟಿತವಾದ ಶಿಕ್ಷೆಯನ್ನು ನೀಡಲು ಇಲ್ಲಿ ಅಸಾಧ್ಯ.

ಕೋಟ್ಯಂತರ ಯಹೂದಿಗಳ ಜನಾಂಗೀಯ ಹತ್ಯೆ ಮಾಡಿದ ಅಡಾಲ್ಫ್ ಹಿಟ್ಲರ್‌ಗೆ ಐಹಿಕ ನ್ಯಾಯಾಲಯ ಕೊಟ್ಟ ಶಿಕ್ಷೆಯೇನು? ಏನೂ ಇಲ್ಲ. ಆತನೇ ಆತ್ಮಹತ್ಯೆಗೆ ಶರಣಾದನೆಂದು ಮಾತ್ರ. ಹಾಗಾದರೆ ಆತ ಕೊಂದು ಹಾಕಿದ ಲೆಕ್ಕಕ್ಕೆ ಅನುಸಾರವಾಗಿ ಆತನನ್ನು ಶಿಕ್ಷಿಸುವವರು ಯಾರು?

ಹಿರೋಷಿಮಾ ನಾಗಸಾಕಿಗಳಲ್ಲಿ ಅಣುಬಾಂಬುಗಳನ್ನು ಸುರಿಸಿ ಕೋಟ್ಯಂತರ ಜಪಾನೀಯರನ್ನು ಹತ್ಯೆಮಾಡಿದ ಮತ್ತು ಇಂದಿಗೂ ಅದರ ಘೋರ ಪರಿಣಾಮವನ್ನು ಜನರು ಅನುಭವಿಸುತ್ತಿರುವಂತೆ ಮಾಡಿದವರಿಗೆ ಐಹಿಕ ನ್ಯಾಯಾಲಯ ಏನಾದರೂ ಶಿಕ್ಷೆ ನೀಡೀತೇ?

ಮದುವೆಯಾಗುವ ಆಮಿಷವೊಡ್ಡಿ ಇಪ್ಪತ್ತು ಮಂದಿ ಯುವತಿಯರೊಂದಿಗೆ ಕಾಮತೀಟೆ ತೀರಿಸಿ ಅವರೆಲ್ಲರನ್ನೂ ಬರ್ಬರವಾಗಿ ಕೊಂದು ಹಾಕಿದ ಸಯನೈಡ್ ಕಿಲ್ಲರ್‌ಗೆ ಐಹಿಕ ನ್ಯಾಯಾಲಯ ನೀಡುವ ಶಿಕ್ಷೆ ಆತನ ಕ್ರೌರ್ಯಕ್ಕೆ ಸಮಾನವಾಗಿರುವ ಶಿಕ್ಷೆಯಾಗಿರುವುದೇ? ಮನೆಮಂದಿಯನ್ನು ಕೊಂದು ಹಾಕಿ, ಮಹಿಳೆಯರ ಮೇಲೆ ಅತ್ಯಾಚಾರ ಮಾಡಿ, ಮನೆಯನ್ನು ಕೊಳ್ಳೆಹೊಡೆದು, ಬೀದಿಪಾಲಾಗಿ ಮಾಡಲಾದ ಎಷ್ಟೋ ಮುಗ್ಧ ಜನರು ಕೋಮುಗಲಭೆಗಳ ಬಲಿಪಶುಗಳಾಗಿ ಮಾರ್ಪಟ್ಟಿದ್ದಾರೆ. ಇವರ ಕಣ್ಣುಗಳಿಂದ ಸುರಿಯುವ ಒಂದೊಂದು ಹನಿಗಳೂ ನ್ಯಾಯವನ್ನು ಬೇಡುತ್ತಿವೆ. ಆದರೆ ಕೋಮುಗಲಭೆಗಳ ಪ್ರಾಯೋಜಕರು ಕುರ್ಚಿಯಲ್ಲಿ ಕುಳಿತು ರಾಜಾರೋಷವಾಗಿ ರಾಜ್ಯವನ್ನು ಆಳುತ್ತಿದ್ದಾರೆ. ಇಂತಹವರನ್ನು ಶಿಕ್ಷಿಸುವುದು ಯಾರು? ಇವರಿಗೆ ಶಿಕ್ಷೆಯೆಂಬುದೇ ಇಲ್ಲವೇ?

ನಮ್ಮ ಈ ಐಹಿಕ ಜೀವನದ ಹೊರತು ಬೇರೇನೂ ಇಲ್ಲ. ನಾವಿಲ್ಲಿ ಬದುಕುತ್ತೇವೆ ಮತ್ತು ಮರಣಹೊಂದುತ್ತೇವೆ. ಕಾಲದ ಹೊರತು ಬೇರೇನೂ ನಮ್ಮನ್ನು ನಾಶಗೊಳಿಸುವುದಿಲ್ಲ ಎಂದು ಅಂದಿನ ಮಕ್ಕಾ ನಿವಾಸಿಗಳಾದ ಬಹುದೇವಾರಾಧಕರು ಹೇಳಿದಂತೆ ಇಂದು ತಮ್ಮನ್ನು ತಾವೇ ವಿಚಾರವಾದಿಗಳೆಂದು ಘೋಷಿಸಿಕೊಳ್ಳುವವರು ಹೇಳುತ್ತಿದ್ದಾರೆ. ಆದರೆ ಈ ಮೇಲಿನ ಪ್ರಶ್ನೆಗಳಿಗೆ ಅವರ ಬಳಿ ಸೂಕ್ತ ಉತ್ತರವೇ ಇಲ್ಲ.

ಮರಣಾನಂತರ ಜೀವನವೆಂಬುದು ಇಲ್ಲವೆಂದಾದರೆ ಈ ಐಹಿಕ ಜೀವನದಲ್ಲಿ ಮಾಡುವ ಸತ್ಕಾರ್ಯಕ್ಕೆ ಯಾವ ಅರ್ಥವೂ ಇಲ್ಲ. ಮಾನವೀಯತೆಗೆ ಬೆಲೆಯೇ ಇಲ್ಲ.

ನಾವೇನೇ ಮಾಡಿದರೂ ಅದಕ್ಕಿರುವ ಶಿಕ್ಷೆ ಈ ಇಹಲೋಕಕ್ಕಷ್ಟೇ ಸೀಮಿತವಾಗಿದೆ ಎಂದು ಭಾವಿಸುವವರಿಗೆ ದುಷ್ಕೃತ್ಯವೆಸಗಲು ಯಾವುದೇ ಅಡ್ಡಿಯೂ ಇರುವುದಿಲ್ಲ. ನ್ಯಾಯದ ಕಣ್ತಪ್ಪಿಸಿ, ಲಂಚ ಕೊಟ್ಟು ಅಥವಾ ಪ್ರಭಾವಗಳನ್ನು ಬಳಸಿ ಇಲ್ಲಿ ಏನನ್ನೂ ಮಾಡಲು ಸಾಧ್ಯವಿದೆ. ಸತ್ಯ, ನ್ಯಾಯ, ಮಾನವೀಯತೆಗಳನ್ನು ತನ್ನ ಆಭರಣಗಳಾಗಿ ತೊಟ್ಟುಕೊಂಡ ಸಾತ್ವಿಕನಿಗೆ ಇಲ್ಲಿ ದೊರೆಯುವುದು ಕೇವಲ ಅಪಹಾಸ್ಯ, ಗೇಲಿ ಮತ್ತು ನಷ್ಟಗಳಷ್ಟೇ ಆಗಿವೆ. ಕೆಲವೊಮ್ಮೆ ಸತ್ಯಸಂಧನೇ ಶಿಕ್ಷೆಗೆ ಗುರಿಯಾಗಬೇಕಾದ ಪ್ರಸಂಗಗಳೂ ಇಲ್ಲಿ ಜರಗುತ್ತವೆ. ಹೀಗಿರುವಾಗ ಬದುಕು ಇಹಲೋಕಕ್ಕೆ ಸೀಮಿತವಾಗಿದೆ ಎಂದು ವಾದಿಸುವವರ ಪ್ರಕಾರ ಈ ಬದುಕಿಗೆ ಯಾವ ಅರ್ಥವೂ ಇಲ್ಲ. ಅವನೊಬ್ಬ ಸಾತ್ವಿಕನಾಗಿದ್ದ ಎಂದು ಇತಿಹಾಸದ ಪುಟಗಳಲ್ಲಿ ದಾಖಲಾಗುವುದಷ್ಟೇ ಅಲ್ಲದೆ ಸಾತ್ವಿಕನೊಬ್ಬನ ಒಳ್ಳೆಯತನಕ್ಕೆ ತಕ್ಕ ಪ್ರತಿಫಲ ಈ ಜಗತ್ತಿನಲ್ಲಿ ದೊರೆಯುವುದೇ ಇಲ್ಲ.

ಮಾನವನು ತನ್ನ ಐಹಿಕ ಜೀವನದಲ್ಲಿ ಮಾಡಿದ ಪ್ರತಿಯೊಂದು ಕರ್ಮಗಳ ಕುರಿತೂ –ಅದು ಒಳಿತಾಗಿದ್ದರೂ ಕೆಡುಕಾಗಿದ್ದರೂ– ಕೂಲಂಕುಶ ವಿಚಾರಣೆ ಮಾಡಲಾಗುವ ಒಂದು ದಿನ ಬರಲೇಬೇಕು ಮತ್ತು ಅವನ ಒಳಿತಿಗೆ ಅನುಗುಣವಾಗಿ ಪಾರಿತೋಷಕ ಮತ್ತು ಕೆಡುಕಿಗೆ ಅನುಗುಣವಾಗಿ ದಂಡನೆ ದೊರೆಯಲೇಬೇಕೆಂದು ಮನುಷ್ಯನ ಆಂತರಿಕ ಪ್ರಜ್ಞೆ ಬೇಡುತ್ತದೆ. ಆದರಣೀಯ ಕುರ್‌ಆನ್ ಹೇಳುತ್ತದೆ:

﴿وَقَالَ الَّذِينَ كَفَرُوا لَا تَأْتِينَا السَّاعَةُ قُلْ بَلَى وَرَبِّي لَتَأْتِيَنَّكُمْ عَالِمِ الْغَيْبِ لَا يَعْزُبُ عَنْهُ مِثْقَالُ ذَرَّةٍ فِي السَّمَاوَاتِ وَلَا فِي الْأَرْضِ وَلَا أَصْغَرُ مِنْ ذَلِكَ وَلَا أَكْبَرُ إِلَّا فِي كِتَابٍ مُبِينٍ * لِيَجْزِيَ الَّذِينَ آمَنُوا وَعَمِلُوا الصَّالِحَاتِ أُولَئِكَ لَهُمْ مَغْفِرَةٌ وَرِزْقٌ كَرِيمٌ * وَالَّذِينَ سَعَوْا فِي آيَاتِنَا مُعَاجِزِينَ أُولَئِكَ لَهُمْ عَذَابٌ مِنْ رِجْزٍ أَلِيمٌ﴾

**“ಅವಿಶ್ವಾಸಿಗಳು ಹೇಳುತ್ತಾರೆ: ಅಂತ್ಯದಿನವೆಂಬುದು ಬರುವುದೇ ಇಲ್ಲ. (ಓ ಪ್ರವಾದಿ! ಅವರೊಂದಿಗೆ) ಹೇಳು: ಹೌದು! ಅಗೋಚರ ವಿಷಯಗಳನ್ನು ಅರಿತಿರುವ ನನ್ನ ಪ್ರಭುವಿನಾಣೆ ಸತ್ಯ! ಅದು ನಿಮಗೆ ಖಂಡಿತವಾಗಿಯೂ ಬರುತ್ತದೆ. ಆಕಾಶಗಳಲ್ಲಾಗಲಿ, ಭೂಮಿಯಲ್ಲಾಗಲಿ ಒಂದು ಅಣುವಿನ ತೂಕದಷ್ಟಿರುವುದು ಕೂಡ –ಅದಕ್ಕಿಂತ ದೊಡ್ಡದಾಗಿರುವುದು ಅಥವಾ ಚಿಕ್ಕದಾಗಿರುವುದು ಕೂಡ– ಅವನ ಜ್ಞಾನದಿಂದ ಪಾರಾಗಲು ಸಾಧ್ಯವಿಲ್ಲ. ಎಲ್ಲವೂ ಒಂದು ಸುಸ್ಪಷ್ಟ ಗ್ರಂಥದಲ್ಲಿ ದಾಖಲಿಸಲ್ಪಟ್ಟಿವೆ. ಅದು ಯಾಕೆಂದರೆ, ವಿಶ್ವಾಸವಿಟ್ಟವರಿಗೆ ಮತ್ತು ಸತ್ಕರ್ಮವೆಸಗಿದವರಿಗೆ ಪ್ರತಿಫಲ ನೀಡುವ**

**ಸಲುವಾಗಿದೆ. ಅಂತಹವರಿಗೆ ಪಾಪಮುಕ್ತಿಯೂ ಗೌರವಾರ್ಹವಾದ ಅನ್ನಾಧಾರವೂ ಇದೆ. ನಮ್ಮ ದೃಷ್ಟಾಂತಗಳನ್ನು ನಿಷ್ಫಲಗೊಳಿಸಲು ಯತ್ನಿಸುವವರಾರೋ ಅವರಿಗೆ ಕಠಿಣವಾದ ಯಾತನಾಮಯ ಶಿಕ್ಷೆಯಿದೆ." (ಕುರ್‌ಆನ್ 34/3–5)**

ನ್ಯಾಯ ಮತ್ತು ಕರುಣೆಯೆಂಬ ದೈವಿಕ ಗುಣವಿಶೇಷಣಗಳು ಅದರ ಸಮಗ್ರರೂಪದಲ್ಲಿ ಪ್ರಕಟಗೊಳ್ಳುವ ದಿನವಾಗಿದೆ ಪುನರುತ್ಥಾನ ದಿನ. ಶಾಶ್ವತವಾದ ಸೌಭಾಗ್ಯವು ತಮ್ಮನ್ನು ನಿರೀಕ್ಷಿಸುತ್ತಿದೆ ಎಂಬ ಹಂಬಲದೊಂದಿಗೆ ತನಗೋಸ್ಕರ ಐಹಿಕ ಜೀವನದಲ್ಲಿ ಕಷ್ಟ ನಷ್ಟಗಳನ್ನು ಅನುಭವಿಸಿದ, ತ್ಯಾಗಗಳನ್ನು ಸಹಿಸಿದ ವಿಶ್ವಾಸಿಗಳ ಮೇಲೆ ಅಂದು ಅಲ್ಲಾಹು ತನ್ನ ಕರುಣೆಯನ್ನು ಪೂರ್ಣವಾಗಿ ವರ್ಷಿಸುವನು. ಆದರೆ ಅವನ ವಿಧಿ ನಿಷೇಧಗಳನ್ನು ಧಿಕ್ಕರಿಸಿ, ಮರಣಾನಂತರ ಜೀವನವನ್ನು ನಿಷೇಧಿಸಿ, ತನ್ನ ಸ್ವೇಚ್ಛೆಯ ದಾಸನಾಗಿ ಬದುಕಿದವರಾರೋ ಅವರಿಗೆ ಅಲ್ಲಿ ಶಿಕ್ಷೆಯ ಹೊರತು ಬೇರೇನೂ ದೊರೆಯಲಾರದು. ಈ ಎರಡು ವಿಧ ಜನರನ್ನು ಸ್ಪಷ್ಟವಾಗಿ ಬೇರ್ಪಡಿಸುತ್ತಾ ಕುರ್‌ಆನ್ ಹೇಳುತ್ತದೆ:

﴿أَفَمَنْ وَعَدْنَاهُ وَعْدًا حَسَنًا فَهُوَ لَاقِيهِ كَمَنْ مَتَّعْنَاهُ مَتَاعَ الْحَيَاةِ الدُّنْيَا ثُمَّ هُوَ يَوْمَ الْقِيَامَةِ مِنَ الْمُحْضَرِينَ﴾

**"ನಾವು ಯಾರಿಗೆ ಉತ್ತಮವಾದ ವಾಗ್ದಾನವನ್ನು ನೀಡಿ, ಆ ವಾಗ್ದಾನವು ಸತ್ಯವಾಗಿ ನೆರವೇರುವುದನ್ನು ಕಂಡವನು ಮತ್ತು ಯಾರನ್ನು ನಾವು ಐಹಿಕ ಜೀವನದ ಸುಖಲೋಲುಪತೆಗಳನ್ನು ಆಸ್ವಾದಿಸುವಂತೆ ಮಾಡಿ ತರುವಾಯ ಪುನರುತ್ಥಾನ ದಿನದಂದು ಖಂಡಿತವಾಗಿಯೂ (ಶಿಕ್ಷೆಗಾಗಿ) ಹಾಜರುಗೊಳಿಸಲ್ಪಟ್ಟವರ ಪೈಕಿ ಸೇರಿದವನಾಗಿರುವವನು ಸಮಾನರಾಗುವರೇ?" (ಕುರ್‌ಆನ್ 28/61)**

ಇಲ್ಲ ಎಂದು ಮನುಷ್ಯನ ಆಂತರಿಕ ಪ್ರಜ್ಞೆ ಹೇಳುತ್ತದೆ. ಐಹಿಕ ಜೀವನವು ಮರಣಾನಂತರ ಬರುವ ಶಾಶ್ವತ ಜೀವನಕ್ಕಿರುವ ತಯಾರಿಯಾಗಿದೆ. ಆದರೆ ಯಾರು ಆ ಮರಣಾನಂತರ ಶಾಶ್ವತ ಜೀವನವನ್ನು ನಿಷೇಧಿಸುತ್ತಾನೋ ಅವನು ತನ್ನ ಸ್ವೇಚ್ಛೆಗಳ ಗುಲಾಮನಾಗಿ ಮಾರ್ಪಡುತ್ತಾನೆ ಮತ್ತು ಐಹಿಕ ಜೀವನವೆಂದರೆ ಅದು ಕೇವಲ ಸುಖಲೋಲುಪತೆಗಳ ಆಸ್ವಾದನೆಗಿರುವ ಲೋಕವೆಂದು ಪರಿಗಣಿಸುತ್ತಾನೆ.

ಅಂತಹ ಜನರು ತಮ್ಮ ಅವಿವೇಕತನವನ್ನು ಅರಿತುಕೊಳ್ಳುವುದು ಮರಣದ ಸಂದರ್ಭವಾಗಿದೆ. ಆ ಸಂದರ್ಭದಲ್ಲಿ ತಮ್ಮನ್ನು ಪುನಃ ಇಹಲೋಕದತ್ತ ಮರಳಿಸುವಂತೆ ಅವರು ಅಲವತ್ತುಕೊಳ್ಳುವರು. ಅವಿಶ್ವಾಸಿಗಳ ಈ ಅಸಹಾಯಕ ಸ್ಥಿತಿ,

ವಿಚಾರಣಾ ದಿನದ ಭಯ ಮತ್ತು ವಿಶ್ವಾಸಿಗಳಿಗೆ ಅಲ್ಲಾಹು ದಯಪಾಲಿಸುವ ಶಾಶ್ವತ ಸೌಭಾಗ್ಯದ ಕುರಿತು ಈ ಕೆಳಗಿನ ಕುರ್‌ಆನ್ ವಚನಗಳಲ್ಲಿ ಹೃದಯಂಗಮವಾಗಿ ವಿವರಿಸಲಾಗಿದೆ.

﴿حَتَّى إِذَا جَاءَ أَحَدَهُمُ الْمَوْتُ قَالَ رَبِّ ارْجِعُونِ * لَعَلِّي أَعْمَلُ صَالِحًا فِيمَا تَرَكْتُ كَلَّا إِنَّهَا كَلِمَةٌ هُوَ قَائِلُهَا وَمِنْ وَرَائِهِمْ بَرْزَخٌ إِلَى يَوْمِ يُبْعَثُونَ * فَإِذَا نُفِخَ فِي الصُّورِ فَلَا أَنْسَابَ بَيْنَهُمْ يَوْمَئِذٍ وَلَا يَتَسَاءَلُونَ * فَمَنْ ثَقُلَتْ مَوَازِينُهُ فَأُولَئِكَ هُمُ الْمُفْلِحُونَ * وَمَنْ خَفَّتْ مَوَازِينُهُ فَأُولَئِكَ الَّذِينَ خَسِرُوا أَنْفُسَهُمْ فِي جَهَنَّمَ خَالِدُونَ * تَلْفَحُ وُجُوهَهُمُ النَّارُ وَهُمْ فِيهَا كَالِحُونَ * أَلَمْ تَكُنْ آيَاتِي تُتْلَى عَلَيْكُمْ فَكُنْتُمْ بِهَا تُكَذِّبُونَ * قَالُوا رَبَّنَا غَلَبَتْ عَلَيْنَا شِقْوَتُنَا وَكُنَّا قَوْمًا ضَالِّينَ * رَبَّنَا أَخْرِجْنَا مِنْهَا فَإِنْ عُدْنَا فَإِنَّا ظَالِمُونَ * قَالَ اخْسَئُوا فِيهَا وَلَا تُكَلِّمُونِ * إِنَّهُ كَانَ فَرِيقٌ مِنْ عِبَادِي يَقُولُونَ رَبَّنَا آمَنَّا فَاغْفِرْ لَنَا وَارْحَمْنَا وَأَنْتَ خَيْرُ الرَّاحِمِينَ * فَاتَّخَذْتُمُوهُمْ سِخْرِيًّا حَتَّى أَنْسَوْكُمْ ذِكْرِي وَكُنْتُمْ مِنْهُمْ تَضْحَكُونَ * إِنِّي جَزَيْتُهُمُ الْيَوْمَ بِمَا صَبَرُوا أَنَّهُمْ هُمُ الْفَائِزُونَ﴾

**“ಅವರ (ಅವಿಶ್ವಾಸಿಗಳ) ಪೈಕಿ ಒಬ್ಬನಿಗೆ ಮರಣವು ಆಸನ್ನವಾಗುವವರೆಗೆ, (ಆಗ) ಅವನು ಹೇಳುವನು: ಓ ನನ್ನ ಪ್ರಭೂ! ನನ್ನನ್ನು (ಇಹಲೋಕಕ್ಕೆ) ಮರಳಿಸು. ಹಾಗೆ ಮರಳಿಸುವುದಾದರೆ ನಾನು ತೊರೆದ ಸತ್ಕರ್ಮಗಳನ್ನು ಮಾಡುವೆನು. ಇಲ್ಲ! ಅದು ಅವನು (ಅವಿಶ್ವಾಸಿ) ಮಾತನಾಡುವ ಒಂದು ವಚನ ಮಾತ್ರವಾಗಿದೆ. ಮತ್ತು ಅವರನ್ನು ಪುನರುತ್ಥಾನಗೊಳಿಸುವ ದಿನದ ತನಕ ಅವರ ಹಿಂದೆ ಒಂದು ಬರ್ಝಖ್ (ತಡೆ) ಇರುವುದು. ತರುವಾಯ ಕಹಳೆಯಲ್ಲಿ ಊದಲಾದರೆ ಆ ದಿನದಂದು ಅವರ ನಡುವೆ ಯಾವುದೇ ಸಂಬಂಧಗಳೂ ಇರಲಾರದು ಮತ್ತು ಅವರು ಪರಸ್ಪರರ ಕುರಿತು ವಿಚಾರಿಸಲಾರರು. ಯಾರ (ಸತ್ಕರ್ಮಗಳ) ತಕ್ಕಡಿಯು ಭಾರವಾಗುವುದೋ ಅವರು ಯಶಸ್ಸು ಗಳಿಸಿದವರಾಗುವರು. ಮತ್ತು ಯಾರ (ಸತ್ಕರ್ಮಗಳ) ತಕ್ಕಡಿಯು ಹಗುರವಾಗುವುದೋ ಅವರು ಸ್ವತಃ ತಮ್ಮನ್ನೇ ಕಳೆದುಕೊಳ್ಳುವರು ಮತ್ತು ನರಕಾಗ್ನಿಯಲ್ಲಿ ವಾಸಿಸುವರು. ನರಕಾಗ್ನಿಯು ಅವರ ಮುಖಗಳನ್ನು ಕರಟಿ ಹಾಕುವುದು ಮತ್ತು ವಿರೂಪಗೊಂಡ ತುಟಿಗಳೊಂದಿಗೆ ಅವರು ಹಲ್ಲುಕಿಸಿಯುವರು. ನನ್ನ ವಚನಗಳನ್ನು ನಿಮಗೆ ಓದಿಕೊಡಲಾಗಲಿಲ್ಲವೇ ಮತ್ತು ನೀವು ಅದನ್ನು ನಿರಾಕರಿಸಲಿಲ್ಲವೇ? (ಎಂದು ಅವರೊಂದಿಗೆ ಕೇಳಲಾದಾಗ) ಅವರು ಹೇಳುವರು: ನಮ್ಮ ಪ್ರಭೂ! ನಮ್ಮ ದೌರ್ಭಾಗ್ಯವು**

**ನಮ್ಮನ್ನು ಸೋಲಿಸಿತು ಮತ್ತು ನಾವು ಪಾಪಿಗಳಾದ ಜನತೆಯಾಗಿದ್ದೆವು. ನಮ್ಮ ಪ್ರಭೂ, ನಮ್ಮನ್ನು ಇದರಿಂದ ಹೊರತೆಗೆ. ನಾವೇನಾದರೂ (ಪುನಃ ಪಾಪದೆಡೆಗೆ) ಮರಳಿದರೆ ಖಂಡಿತವಾಗಿಯೂ ನಾವು ಅಕ್ರಮಿಗಳಾಗಿರುವೆವು. ಅವನು (ಅಲ್ಲಾಹು) ಹೇಳುವನು: ಹೇಯ ನಡತೆಯೊಂದಿಗೆ ಇದರಲ್ಲೇ ಇರಿ ಮತ್ತು ನನ್ನೊಂದಿಗೆ ಮಾತನಾಡಬೇಡಿ. ಖಂಡಿತವಾಗಿಯೂ (ಇಹಲೋಕದಲ್ಲಿ) ನನ್ನ ದಾಸರ ಪೈಕಿ, ನಮ್ಮ ಪ್ರಭೂ! ನಾವು ವಿಶ್ವಾಸವಿಟ್ಟಿದ್ದೇವೆ ಆದ್ದರಿಂದ ನಮ್ಮನ್ನು ಕ್ಷಮಿಸು ಮತ್ತು ನಮ್ಮ ಮೇಲೆ ಕರುಣೆ ತೋರು; ಕರುಣೆ ತೋರುವವರ ಪೈಕಿ ನೀನು ಅತ್ಯುತ್ತಮನಾಗಿರುವೆ ಎಂದು ಹೇಳುತ್ತಿದ್ದ ಒಂದು ಪಂಗಡವಿತ್ತು. ನನ್ನ ಸ್ಮರಣೆಯನ್ನು ಮರೆತುಬಿಡುವ ತನಕ ನೀವು ಅವರನ್ನು ಹಾಸ್ಯವಸ್ತುವಾಗಿ ಪರಿಗಣಿಸಿದಿರಿ ಮತ್ತು ನೀವು ಅವರನ್ನು ನೋಡಿ ನಗುತ್ತಿದ್ದಿರಿ. ಖಂಡಿತವಾಗಿಯೂ ಈ ದಿನ ನಾನು ಅವರ ಸಹನೆಗೆ ಪ್ರತಿಫಲ ನೀಡಿರುವೆನು. ಮತ್ತು ಸತ್ಯವಾಗಿಯೂ ಅವರೇ ವಿಜಯಗಳಿಸಿದವರು." (ಕುರ್‌ಆನ್ 23/99–110)**

ಮರಣಾನಂತರ ಜೀವನದ ಮೇಲಿರುವ ವಿಶ್ವಾಸವು ಕೇವಲ ಪರಲೋಕ ವಿಜಯವನ್ನಷ್ಟೇ ದಯಪಾಲಿಸುವುದಿಲ್ಲ; ಬದಲಾಗಿ ಐಹಿಕ ಜೀವನದಲ್ಲಿ ಕೂಡ ಶಾಂತಿ ಮತ್ತು ನೆಮ್ಮದಿಯನ್ನು ತಂದುಕೊಡುತ್ತದೆ.

ಪ್ರವಾದಿ ಮುಹಮ್ಮದ್(ﷺ)ರವರ ನಿಯೋಗಪೂರ್ವ ಅರೇಬಿಯಾ ಜನತೆಯ ಕುರಿತು ಆಲೋಚಿಸಿ ನೋಡಿ. ಕೊಲೆಗುಡುಕರೂ, ಯುದ್ಧದಾಹಿಗಳೂ, ವಿಷಯ ಲಂಪಟರೂ, ಕ್ರೂರರೂ ಆಗಿದ್ದ ಆ ಜನತೆಯನ್ನು ಮರಣಾನಂತರ ಜೀವನವೆಂಬ ಪರಿಕಲ್ಪನೆಯು ಮಾದರೀ ಯೋಗ್ಯ ಸಮಾಜವಾಗಿ ಮಾರ್ಪಡಿಸಿತು.

ಯಾವ ಸಮಾಜವು ಅಲ್ಲಾಹನ ಮೇಲೆ ಮತ್ತು ಪರಲೋಕದ ಮೇಲೆ ವಿಶ್ವಾಸವಿಟ್ಟು ನಿಷ್ಠೆಯೊಂದಿಗೆ ಜೀವಿಸುತ್ತದೋ ಆ ಸಮಾಜದಲ್ಲಿ ದುಷ್ಕೃತ್ಯಗಳು ಗೋಚರಿಸುವುದು ತೀರಾ ವಿರಳವಾಗಿರುವುದು. ಯಾಕೆಂದರೆ ತಾನು ಮಾಡಿದ ಕೃತ್ಯಗಳ ಕೂಲಂಕುಶ ವಿಚಾರಣೆ ನಡೆಯಲಿದೆ, ಇಹಲೋಕದಲ್ಲಿ ತಾನು ಶಿಕ್ಷೆಯಿಂದ ಪಾರಾದರೂ ಪರಲೋಕದಲ್ಲಿ ದೈವಿಕ ನ್ಯಾಯಾಲಯದಿಂದ ಪಾರಾಗಲು ಸಾಧ್ಯವಿಲ್ಲವೆಂದು ಆ ಸಮಾಜದ ಪ್ರತಿಯೊಬ್ಬ ಸದಸ್ಯನೂ ಅರಿತಿರುತ್ತಾನೆ. ಒಳಿತಿಗೆ ಹತ್ತುಪಟ್ಟು ಪುಣ್ಯವೂ, ಕೆಡುಕಿಗೆ ತತ್ಸಮಾನ ಶಿಕ್ಷೆಯೂ ದೊರೆಯುತ್ತದೆಂಬ ಇಸ್ಲಾಮಿನ ತತ್ವವನ್ನು ವಸ್ತುನಿಷ್ಠವಾಗಿ ಅಂಗೀಕರಿಸಿ ಕಾರ್ಯಪ್ರವೃತ್ತವಾಗುವ ಒಂದು ಸಮಾಜದಲ್ಲಿ ಉನ್ನತಿ, ಪ್ರಗತಿ, ಶಾಂತಿ, ನೆಮ್ಮದಿಗಳಷ್ಟೇ ಕಾಣಲು ಸಾಧ್ಯ.

ಆದ್ದರಿಂದ ಮರಣಾನಂತರ ಜೀವನವೆಂಬ ಪರಿಕಲ್ಪನೆಯನ್ನು ನಿಷೇಧಿಸಿದರೆ ಅದರ ಘೋರ ಪರಿಣಾಮವನ್ನು ಪರಲೋಕದಲ್ಲಿ ಮಾತ್ರವಲ್ಲದೆ ಇಹಲೋಕದಲ್ಲೂ ಎದುರಿಸಬೇಕಾಗುತ್ತದೆ. ಇದು ಕೇವಲ ವ್ಯಕ್ತಿಯನ್ನು ಮಾತ್ರವಲ್ಲದೆ ಸಮಾಜವನ್ನೂ ಬಾಧಿಸುತ್ತದೆ. ಮರಣಾನಂತರ ಜೀವನವನ್ನು ಒಂದು ಸಮಾಜವು ಪೂರ್ಣವಾಗಿ ನಿಷೇಧಿಸುವಾಗ ಆ ಸಮಾಜದಲ್ಲಿ ಕೆಡುಕುಗಳ ವಿಜೃಂಭನೆ ಅಧಿಕವಾಗಿ ಕೊನೆಗೆ ಅದು ನಾಶವಾಗಿ ಹೋಗುತ್ತದೆ. ಇತಿಹಾಸದಲ್ಲಿ ಇದಕ್ಕೆ ಬೇಕಾದಷ್ಟು ಉದಾಹರಣೆಗಳಿವೆ.

وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلى آلِهِ وَصَحْبِهِ أجْمَعِين .

*********